**ಸಾಕ್ಷಿಯನ್ನು ದಿಃ 30.10.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 2ನೇ ಆರೋಪಿ ಪರ ಶ್ರೀ.ಜೆ.ಬಿ. ವಕೀಲರಿಂದಃ**

ನಾನು ದೂರುದಾರರಾದ ರಾಮಚಂದ್ರಯ್ಯ ರ ಪರವಾಗಿಯೂ ಸಾಕ್ಷ್ಯ ನುಡಿಯುತ್ತಿದ್ದೇನೆ. ರಾಮಚಂದ್ರಯ್ಯ ರವರು ನೀಡಿದ ದೂರನ್ನು ಈ ಪ್ರಕರಣದಲ್ಲಿ ನಿಶಾನೆಯಾಗಿ ಗುರುತಿಸಿಕೊಂಡಿಲ್ಲ ಎಂದರೆ ಸರಿ. ರಾಮಚಂದ್ರಯ್ಯ ರವರು ನೀಡಿದ ದೂರನ್ನು ಮತ್ತು ದಾಖಲೆಗಳನ್ನು ನಿಶಾನೆಯಾಗಿ ಗುರುತಿಸಿಕೊಂಡಿಲ್ಲ ಎಂದರೆ ಸರಿ. ನಾವು ಹಣ ಕೇಳಲು ಹೋಗಿದ್ದಾಗ ರಾಮಚಂದ್ರಯ್ಯ ರವರು ಕೂಡ ಹಣ ಕೇಳಲು ಬ್ಲೂನಿಶು ಕಚೇರಿಗೆ ಸುದೀದ್ರನಾಥ್ ರವರನ್ನು ಭೇಟಿ ಮಾಡಲು ಬಂದಿದ್ದರು. ನಾನು 1ನೇ ಆರೋಪಿಯೊಂದಿಗೆ ವ್ಯವಹಾರ ಮಾಡುವಾಗ ರಾಮಚಂದ್ರಯ್ಯ ರವರ ಪರಿಚಯ ಇರಲಿಲ್ಲ ಎಂದರೆ ಸರಿ. ನಾನು 1ನೇ ಆರೋಪಿಯೊಂದಿಗೆ ವ್ಯವಹಾರ ಮಾಡುವಾಗ ಅದು ಯಾವ ವ್ಯವಹಾರ ಎಂದು ದೂರುದಾರ ರಾಮಚಂದ್ರಯ್ಯ ರವರಿಗೆ ಗೊತ್ತಿರಲಿಲ್ಲ ಎಂದರೆ ಸರಿ. ಅದೇ ರೀತಿ ದೂರುದಾರರು ರಾಮಚಂದ್ರಯ್ಯ ರವರು 1ನೇ ಆರೋಪಿಯೊಂದಿಗೆ ವ್ಯವಹಾರ ಮಾಡುವಾಗ ಅದು ಯಾವ ವ್ಯವಹಾರವೆಂದು ನನಗೆ ಗೊತ್ತಿರಲಿಲ್ಲ ಎಂದರೆ ಸರಿ. ಬ್ಲೂನಿಶು ಕಂಪನಿಯಲ್ಲಿ ಎಷ್ಟು ಜನ ವ್ಯವಹಾರ ಮಾಡಿದ್ದಾರೆಂದು ಹಿಂದೆ ಗೊತ್ತಿರಲಿಲ್ಲ, ಆದರೆ ನಂತರ ಗೊತ್ತಾಯಿತು. 1ನೇ ಆರೋಪಿಯ ವ್ಯವಹಾರಕ್ಕೆ ಸಂಬಂಧಿಸಿದಂತೆ ನಂತರ ಸ್ವಲ್ಪ ಗಲಾಟೆ ಆಯಿತು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಹಣ ಕೊಡುತ್ತೇನೆ ಎಂದು 1ನೇ ಆರೋಪಿ ಹೇಳುತ್ತಾ ಬರುತ್ತಿದ್ದರು ಎಂದು ಹೇಳುತ್ತಾರೆ. ಆ ರೀತಿ ಗಲಾಟೆ ಆದಾಗ ಚೆಕ್ ಮತ್ತು ದಾಖಲೆಗಳನ್ನು ಅವರಿಗೆ ಹಲ್ಲೆ ಮಾಡಿ ನಾನು ತೆಗೆದುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಆಗ ವ್ಯವಹಾರಕ್ಕೆ ಸಂಬಂಧವಿಲ್ಲದ ದೂರುದಾರರನ್ನು ಜೊತೆಗೆ ಸೇರಿಸಿಕೊಂಡಿದ್ದೇನೆ

ಎಂದರೆ ಸರಿಯಲ್ಲ. ಆ ರೀತಿ ಅಕ್ರಮವಾಗಿ ತೆಗೆದುಕೊಂಡ 4 ಚೆಕ್ ಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿ ನಿಪಿ-1 ರಿಂದ 4 ಎಂದು ನಿಶಾನೆಗೊಳಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅವರು ನನಗೆ ಹಣ ಕೊಡಬೇಕಾದ ಕಾರಣ ನಿಪಿ-1 ರಿಂದ 4 ಚೆಕ್ ಗಳನ್ನು ಕೊಟ್ಟಿದ್ದು ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 1ನೇ ಆರೋಪಿ ಹಣ ಕೊಡಲು ಬಾಕಿ ಇರುವ ಕಾರಣ ರೂ.20 ಲಕ್ಷದ ಚೆಕ್ ಕೊಟ್ಟಿದ್ದು ಆ ಚೆಕ್ ಅಮಾನ್ಯಗೊಂಡಿದ್ದು ಆ ಬಗ್ಗೆ ಸಿಸಿ ನಂ.22759/2017 ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿ. 20 ಲಕ್ಷದ ಚೆಕ್ ಅನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯವಹಾರಗಳು ನನ್ನ ಮತ್ತು 1ನೇ ಆರೋಪಿಯ ನಡುವೆ ನಡೆದಿಲ್ಲ. ರೂ.20 ಲಕ್ಷದ ಚೆಕ್ ಗೆ ಸಂಬಂಧಿಸಿದ ವ್ಯವಹಾರವನ್ನು ಹೊರತುಪಡಿಸಿ ಬೇರೆ ಚೆಕ್ ಗಳಿಗೆ ಸಂಬಂಧಿಸಿದಂತೆ ವ್ಯವಹಾರ ನಡೆದಿದೆ ಎಂದು ಸಿಸಿ ನಂ.22759/2017 ಪ್ರಕರಣದಲ್ಲಿ ಹೇಳಿಲ್ಲ ಎಂದರೆ ಸರಿ.

ನನ್ನ ಮತ್ತು 1ನೇ ಆರೋಪಿಯ ನಡುವೆ ರೂ.20 ಲಕ್ಷದ ಚೆಕ್ ಅನ್ನು ಹೊರತುಪಡಿಸಿ ನಾನು ಹಣ ಹೂಡಿಕೆ ಮಾಡಿದಾಗ ಎರಡು ಬಾರಿ 1ನೇ ಆರೋಪಿ ನನಗೆ ನಗದಾಗಿ ರೂ.2 ಲಕ್ಷ ಹಣ ಕೊಟ್ಟಿದ್ದಾರೆ. ಆ ರೂ.2 ಲಕ್ಷ ಹಣ ಮೇಲೆ ಹೇಳಿದ ರೂ.20 ಲಕ್ಷ ಚೆಕ್ ಗೆ ಸಂಬಂಧಪಟ್ಟಿರುವುದು ಎಂದರೆ ಸರಿ. ಸಾಕ್ಷಿ ಸ್ವತಃ ಅಸಲು ಹಣ ಹಿಂತಿರುಗಿಸಿಲ್ಲ. ಅವರು ಕೇವಲ ಅಸಲು ಹಣಕ್ಕೆ ಸಂಬಂಧಿಸಿದಂತೆ ರಿಟರ್ನ್ಸ್ ಮಾತ್ರ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಅವರು ಕೇವಲ ಅಸಲು ಹಣಕ್ಕೆ ಸಂಬಂಧಿಸಿದಂತೆ ರಿಟರ್ನ್ಸ್ ಮಾತ್ರ ಕೊಟ್ಟಿದ್ದಾರೆ ಮತ್ತು ಅಸಲು ಹಣ ಹಿಂತಿರುಗಿಸಿಲ್ಲ ಎಂದು ಈ ಪ್ರಕರಣದ ಪ್ರಮಾಣೀಕೃತ ಹೇಳಿಕೆಯಲ್ಲಿ ಹೇಳಿದ್ದೇನೆ. ನಿಪಿ-6 ರಲ್ಲಿ ಅವರು ರಿಟರ್ನ್ಸ್ ಬಗ್ಗೆ ಹೇಳಿಲ್ಲ ಎಂದರೆ ಸರಿ.

ನಿಪಿ-6 ಕರಾರು ನನ್ನ ಮತ್ತು ಬ್ಲೂನಿಶು ಕಂಪನಿಯ ಎಂ.ಡಿ. ನಡುವೆ ಆಗಿದೆ. 2ನೇ ಆರೋಪಿಯ ಹೆಸರು ನಿಪಿ-6 ರಲ್ಲಿ ಇಲ್ಲ ಎಂದರೆ ಸರಿ. ನಿಪಿ-6 ಕ್ಕೆ ಸಂಬಂಧಿಸಿದಂತೆ ಸ್ಟಾಂಪ್ ಪೇಪರ್ ಅನ್ನು ಶ್ರೀನಿವಾಸ ಎ ಎಂದರೆ ಸರಿಯಲ್ಲ. ಖರೀದಿಸಿದ್ದಾರೆ ಎಂದರೆ ಸರಿ. ನಿಪಿ-6 ಕ್ಕೆ ಸಂಬಂಧಿಸಿದಂತೆ ಸ್ಟಾಂಪ್ ಪೇಪರ್ ಅನ್ನು

1ನೇ ಆರೋಪಿ ಖರೀದಿಸಿದ್ದಾರೆಂದು ಇಲ್ಲ ಎಂದರೆ ಸರಿ. ಸ್ಟಾಂಪ್ ಡ್ಯೂಟಿ ಅನ್ನು ನಾನೇ ಕಟ್ಟಿರುತ್ತೇನೆ. ಮೊದಲ ಪಕ್ಷಗಾರರು ಶ್ರೀನಿವಾಸ ಎ ಅಂತಾ ಇದೆ ಎಂದರೆ ಸರಿ. 2ನೇ ಪಕ್ಷಗಾರರು ಸುದೀಂದ್ರನಾಥ್ ಇದೆ ಎಂದರೆ ಸರಿ. 1ನೇ ಪಕ್ಷಗಾರರು ದಾಖಲೆಯನ್ನು ಬರೆದುಕೊಡುವವರು ಎಂದು ಹಾಗೂ 2ನೇ ಪಕ್ಷಗಾರರು ದಾಖಲೆಯನ್ನು ಬರೆಸಿಕೊಳ್ಳುವವರು ಎಂದರೆ ನನಗೆ ಗೊತ್ತಿಲ್ಲ. ದಾಖಲೆ ಬರೆಸಿಕೊಂಡವರಲ್ಲಿ ಮೂಲ ದಾಖಲೆ ಇರಬೇಕು ಎಂದರೆ ಸರಿ. ನಿಪಿ-6 ರಲ್ಲಿ 2ನೇ ಆರೋಪಿಯ ಹೆಸರಿಲ್ಲ, ಸಾಕ್ಷಿ ಸ್ವತಃ ಕಂಪನಿಯಲ್ಲಿ ಚೆಕ್ ಗಳಿಗೆ ಸಹಿ ಮಾಡಲು ಒಬ್ಬರಿಗೆ ಮಾತ್ರ ಅಧಿಕಾರ ಇದೆ ಹಾಗಾಗಿ ಒಬ್ಬರು ಮಾತ್ರ ಅಗ್ರಿಮೆಂಟ್ ಗೆ ಸಹಿ ಮಾಡಿದ್ದಾರೆ ಎಂದು ಹೇಳುತ್ತಾರೆ. 2ನೇ ಆರೋಪಿ ಬ್ಲೂನಿಶು ಕಂಪನಿಯ ಅಸಿಸ್ಟಂಟ್ ಎಂ.ಡಿ. ಆಗಿದ್ದಾರೆ. ಆ ಬಗ್ಗೆ ನಾನು ದಾಖಲೆ ಸಲ್ಲಿಸಿಲ್ಲ, ಆದರೆ ದೂರಲ್ಲಿ ಹೇಳಲಾಗಿದೆ. ನಿಪಿ-6 ರಲ್ಲಿ 2ನೇ ಆರೋಪಿಯ ಹೆಸರು ಇಲ್ಲ. ರೂ.10 ಲಕ್ಷ ಪಡೆದ ಬಗ್ಗೆ 1 ಅಥವಾ 2ನೇ ಆರೋಪಿತರಿಂದ ರಶೀದಿಯನ್ನು ಪಡೆದುಕೊಂಡಿಲ್ಲ, ಸಾಕ್ಷಿ ಸ್ವತಃ ಅದಕ್ಕೆ ಅಗ್ರಿಮೆಂಟೇ ರಶೀದಿ ಎಂದು ಹೇಳುತ್ತಾರೆ. ಆತರಹ ರಶೀದಿಯನ್ನು ಆರೋಪಿತರು ಕೊಟ್ಟಿಲ್ಲ. ರಶೀದಿ ಬಗ್ಗೆ ನನಗೆ ಗೊತ್ತಿಲ್ಲ. ನಾನು ಅಗ್ರಿಮೆಂಟ್ ಪ್ರಕಾರ ಹಣ ಕೊಟ್ಟಿದ್ದೇನೆ.

ನಾನು ಆರೋಪಿತರ ಜೊತೆ ವ್ಯವಹಾರ ಮಾಡದ ಕಾರಣ ರಶೀದಿ ಇಲ್ಲ ಎಂದರೆ ಸರಿಯಲ್ಲ. ಆ ರೀತಿ ದಾಖಲೆಗಳು ಇಲ್ಲದ ಕಾರಣ ನಾನು ಸಲ್ಲಿಸಿದ ರೂ.20 ಲಕ್ಷದ ಚೆಕ್ ಬೌನ್ಸ್ ಪ್ರಕರಣ ವಜಾಗೊಂಡಿದೆ ಎಂದರೆ ಸರಿಯಲ್ಲ. 2ನೇ ಆರೋಪಿಯ ಮೇಲೆ ಆ ಚೆಕ್ ಬೌನ್ಸ್ ಪ್ರಕರಣ ಇಲ್ಲ ಎಂದರೆ ಸರಿ. ಆ ಚೆಕ್ ಬೌನ್ಸ್ ಪ್ರಕರಣ ವಜಾ ಆಗಿ 5 ವರ್ಷ ಕ್ಕಿಂತಲೂ ಹೆಚ್ಚು ವರ್ಷ ಆದರೂ ಅಪೀಲು ಸಲ್ಲಿಸಿಲ್ಲ ಎಂದರೆ ಸಾಕ್ಷಿ ಪ್ರಕರಣದ ದಾಖಲಿಸಿದ ನಂತರ ಆರೋಪಿಗೆ ವಾರೆಂಟ್ ಆಯಿತು. ಆ ನಂತರ ಕರೋನ ಬಂತು, ಆ ಬಳಿಕ ನಾನು ಕೇಸಿಗೆ ಹಾಜರಾಗದ ಕಾರಣ ವಜಾ ಆಗಿದೆ. ಆ ಆದೇಶವನ್ನು ಪ್ರಶ್ನಿಸಿ ಈವರೆಗೆ ಅಪೀಲು ಸಲ್ಲಿಸಿಲ್ಲ. ಅಪೀಲು ಸಲ್ಲಿಸಬೇಕೆಂಬ ಇಚ್ಛೆ ಇಲ್ಲ. ನಿಪಿ-1 ರಿಂದ 4 ರ ಚೆಕ್ ಗಳಲ್ಲಿ 2ನೇ ಆರೋಪಿಯ

ಹೆಸರು ಮತ್ತು ಸಹಿ ಇಲ್ಲ ಎಂದರೆ ಸರಿ. ನಿಪಿ-1 ರಿಂದ 4 ರ ಚೆಕ್ ಗಳನ್ನು 1ನೇ ಆರೋಪಿಗೆ ಶಿಕ್ಷೆಗೆ ಒಳಪಡಿಸಲು ಮಾತ್ರ ಸಲ್ಲಿಸಿದ್ದೇನೆ ಹಾಗೂ 2ನೇ ಆರೋಪಿಗೆ ಶಿಕ್ಷೆಗೆ ಒಳಪಡಿಸಲು ಸಲ್ಲಿಸಿಲ್ಲ ಎಂದರೆ ಸಾಕ್ಷಿ ಹಣ ವಾಪಸ್ಸು ಬರಬೇಕೆಂದು ಸಲ್ಲಿಸಿದ್ದೇನೆ ಎಂದು ಹೇಳುತ್ತಾರೆ.

ನಾನು ಹಣ ಕಟ್ಟಿ ಬಳಿಕ ವಾಪಸ್ಸು ಕೇಳಲು ಹೋದಾಗ 1ನೇ ಆರೋಪಿ ಚೆಕ್ ಗಳನ್ನು ನೀಡಿದ್ದಾರೆ. ಚೆಕ್ ಗಳ ದಿನಾಂಕವನ್ನು ಹೇಳಲು ಸಾಧ್ಯವಿಲ್ಲ. ಆ ಚೆಕ್ ಗಳನ್ನು 2015-16 ರಲ್ಲಿ ಕೊಟ್ಟಿದ್ದಾರೆ. ನಿಗದಿಯಾದ ದಿನಾಂಕಗಳಲ್ಲಿ ಹಣ ವಾಪಸ್ಸು ಕೇಳಲು ಹೋದಾಗ ಚಕ್ ಗಳನ್ನು ಕೊಡುತ್ತಿದ್ದರು. ಆ ಚೆಕ್ ಗಳನ್ನು ನಾನು ಹೇಳುವವರೆಗೂ ಬ್ಯಾಂಕಿಗೆ ಹಾಜರುಪಡಿಸಬೇಡಿ ಎಂದು ಹೇಳುತ್ತಿದ್ದರು. ಪ್ರತಿ ಚೆಕ್ ಗಳು ತಲಾ ರೂ.10 ಲಕ್ಷದ್ದಾಗಿದೆ. 1ನೇ ಆರೋಪಿ ನನಗೆ ಹಣ ಕೊಡಬೇಕಾದ ಕಾರಣ ಚೆಕ್ ಕೊಟ್ಟಿದ್ದಾರೆ ಎಂದರೆ ಸರಿ. ನಾವು ಬಡ್ಡಿ ಕೇಳಲು ಹೋದಾಗೆಲ್ಲಾ ಚೆಕ್ ಗಳನ್ನು ಕೊಟ್ಟಿದ್ದರು. ಅಂದಾಜು 10 ಚಕ್ ಕೊಟ್ಟಿರಬಹುದು ಉಳಿದ ಚೆಕ್ ಗಳು ಕಳೆದುಹೋಗಿದೆ. ಕಳೆದು ಹೋದ ಚೆಕ್ ಗಳು ಕೂಡ ತಲಾ ರೂ.10 ಲಕ್ಷ ಮೌಲ್ಯದ್ದಾಗಿದೆ. ನಾನು ಹೋದಾಗಲೆಲ್ಲಾ ಅಸಲು ಹಣ ಕೊಡುವುದಾಗಿ ಆವಾಗ ಚೆಕ್ ಗಳನ್ನು ಕೊಡುತ್ತಿದ್ದರು, ಆದರೆ ಆರೋಪಿ ಅಸಲು ಹಣವು ನೀಡಿಲ್ಲ, ರಿಟರ್ನ್ಸ್ ನೀಡಿಲ್ಲ, ಕೊನೆಗೆ ಲೆಕ್ಕ ಮಾಡಿ ಅಸಲು ಹಣ ಮತ್ತು ರಿಟರ್ನ್ಸ್ ನ ರೂ.20 ಲಕ್ಷದ ಚೆಕ್ ಅನ್ನು ನೀಡಿದ್ದಾರೆ. ಕಳೆದುಹೋದ ಚೆಕ್ ಗಳ ಮೊತ್ತವು ಕೂಡ ತಲಾ ರೂ.10 ಲಕ್ಷ ಆಗಿತ್ತು, ಒಂದು ಬಾರಿ ರೂ.12 ಲಕ್ಷದ ಚೆಕ್ ಅನ್ನು ನೀಡಿರುತ್ತಾರೆ.

ನಿಪಿ-6 ರಲ್ಲಿ ನಿಪಿ-5 ರಲ್ಲಿರುವ ಬ್ಲೂನಿಶು ಟ್ರೆಂಡ್ ಲಿಂಕ್ ಹೆಸರು ಇ-ಸ್ಟಾಂಪ್ ಪೇಪರ್ ಶಿರೋನಾಮೆ ಇಲ್ಲ ಎಂದರೆ ಸರಿ. ನಿಪಿ-6 ರ ಒಕ್ಕಣೆಯಲ್ಲಿ ಬ್ಲೂನಿಶು ಟ್ರೆಂಡ್ ಲಿಂಕ್ ಹೆಸರು ಇಲ್ಲ ಎಂದರೆ ಸರಿ. ಸಾಕ್ಷಿ ಸ್ವತಃ ಅವರು ಮುಂಚಿತವಾಗಿ ಪ್ಲಾನ್ ಮಾಡಿ ಆ ರೀತಿ ಮಾಡಿದ್ದಾರೆ ಎಂದು ಹೇಳುತ್ತಾರೆ. ನಿಪಿ-6 ನನ್ನ ಸ್ವ ಇಚ್ಚೆಯಿಂದ ಮಾಡಲಾಗಿದೆ. ನಿಪಿ-6 ರಲ್ಲಿ ಕನ್‌ಸಿಡರೇಷನ್ ಪ್ರೈಸ್ ಶೂನ್ಯ ಇದೆ ಎಂದರೆ ಸರಿ. ನನ್ನ ಪ್ರಕಾರ ಎಷ್ಟು ಮೊತ್ತಕ್ಕೆ ಅಗ್ರಿಮೆಂಟ್ ಆಗಿದೆ ಗೊತ್ತಿಲ್ಲ.

ಸಾಕ್ಷಿ ಸ್ವತಃ ಇದೇ ರೀತಿ ಎಲ್ಲಾರಿಗು ಅಗ್ರಿಮೆಂಟ್ ನೀಡಲಾಗಿದೆ. ನನ್ನ ಪ್ರಕಾರ ಅಗ್ರಿಮೆಂಟ್ ರೂ.10 ಲಕ್ಷಕ್ಕೆ ಆಗಿದೆ. ರೂ.1 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ದಾಖಲೆ ನೊಂದಣಿ ಆಗಬೇಕಂದರೆ ಸರಿ. ಅಗ್ರಿಮೆಂಟ್ ನೊಂದಣಿಯಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಸಾಕ್ಷಿ ಸ್ವತಃ ಅದನ್ನು ನೊಂದಣಿ ಮಾಡಿಸಬೇಕೋ ಎಂದು ಸಹ ನನಗೆ ಗೊತ್ತಿಲ್ಲ. ಅಗ್ರಿಮೆಂಟ್ ನ ಪ್ರೋಸಿಜರ್ ಅವರಿಗೆ ಗೊತ್ತಿರಬೇಕಿತ್ತು. ಆ ಅಗ್ರಿಮೆಂಟ್ ರಿಜಿಸ್ಟರ್ ಮಾಡಬೇಕೋ ಬೇಡವೋ ಎಂದು ನಿಮಗೆ ಗೊತ್ತಿರಲಿಲ್ಲ ಅಂದರೆ ಸಾಕ್ಷಿ ನನಗೆ ಅಷ್ಟು ಜ್ಞಾನವಿದಿದ್ದರೆ ನಾನು ಹಣವನ್ನು ಹೂಡಿಕೆ ಮಾಡುತ್ತಿರಲಿಲ್ಲ ಎಂದು ಹೇಳುತ್ತಾರೆ. 2017 ರಲ್ಲಿ ಚೆಕ್ ಬೌನ್ಸ್ ಪ್ರಕರಣದಲ್ಲಿ ಅಗ್ರಿಮೆಂಟ್ ಅನ್ನು ಹಾಜರುಪಡಿಸಿ ನಿಶಾನೆಗೊಳಿಸಿಕೊಂಡಿದ್ದು ಆ ನಂತರವಾದರು ಆ ದಾಖಲೆ ನೊಂದಣಿ ಮಾಡಬೇಕೋ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಈ ಅಗ್ರಿಮೆಂಟ್ ನೊಂದಣಿ ಮಾಡಿಸಬೇಕೆಂದು ನನಗೆ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ.

ಪ್ರಃ  ಒಂದು ಸಾವಿರ ರೂ ನ ಇ-ಸ್ಟಾಂಪ್ ತೆಗೆದುಕೊಳ್ಳಬೇಕಾಗಿತ್ತು ನಂತರ ನ್ಯಾಯಾಲಯಕ್ಕೆ ಹಾಜರುಪಡಿಸುವಾಗ ದಂಡ ಸೇರಿ ಇಪ್ಪತ್ತು ಪಟ್ಟು ಅಂದರೆ 18 ಸಾವಿರ ದಂಡ ಕಟ್ಟಬೇಕಿತ್ತು?

ಉಃ ಈ ಯಾವುದೇ ಪ್ರೊಸಿಡ್ಜರ್ ನನಗೆ ಗೊತ್ತಿಲ್ಲ. ಈಗ ನಾನು ಅಗ್ರಿಮೆಂಟ್ ಮೇಲೆ ಸ್ಟಾಂಪ್ ಡ್ಯೂಟಿ ಕಟ್ಟಲು ರೆಡಿಯಾಗಿದ್ದೇನೆ.

ಅಗ್ರಿಮೆಂಟ್ ನ ಮೂಲ ದಾಖಲೆ ಚೆಕ್ ಬೌನ್ಸ್ ಪ್ರಕರದಲ್ಲಿ ಹಾಜರುಪಡಿಸಿದ್ದು ಅದನ್ನು ಈ ನ್ಯಾಯಾಲಯಕ್ಕೆ ತಂದು ಸ್ಟಾಂಪ್ ಡ್ಯೂಟಿ ಕಟ್ಟಲು ನಾನು ತಯಾರಿದ್ದೇನೆ. ಅಗ್ರಿಮೆಂಟ್ ನ 4ನೇ ಪ್ಯಾರದಲ್ಲಿ ಪೊರ್ಟ್ ಫೊಲೀಯೋ ಮ್ಯಾನೇಜರ್ ಎಂದು ಇದೆ ಮತ್ತು ಬ್ಲೂನಿಶು ಕಂಪನಿ ಇಲ್ಲ ಎಂದರೆ ಸರಿ. ಸಾಕ್ಷಿ ಸ್ವತಃ ಆ ಅಗ್ರಿಮೆಂಟ್ ಅನ್ನು ಬ್ಲೂನಿಶು ಟ್ರೆಂಡ್ ಲಿಂಕ್ ಕಂಪನಿಯ ಕಚೇರಿಯಲ್ಲಿ ಮಾಡಲಾಗಿದೆ ಎಂದು ಹೇಳುತ್ತಾರೆ. ನಿಪಿ-6 ಅಥವಾ ಬೇರೆ ದಾಖಲೆಯಲ್ಲಿ ಬ್ಲೂನಿಶು ಟ್ರೆಂಡ್ ಲಿಂಕ್ ಕಂಪನಿಯ ಕಚೇರಿಯಲ್ಲಿ ಮಾಡಲಾಗಿದೆ ಎಂದು ಇಲ್ಲ.

ನಿಪಿ-6 ಅಗ್ರಿಮೆಂಟ್ ನ ಕೊನೆಯ ಹಾಳೆಯಲ್ಲಿ ನನ್ನದಾಗಲಿ ಅಥವಾ 2ನೇ ಆರೋಪಿಯದಾಗಲೀ ಸಹಿ ಇಲ್ಲ ಎಂದರೆ ಸರಿ. ನಿಪಿ-6 ಅಗ್ರಿಮೆಂಟ್ ನಲ್ಲಿ ಪತ್ರ ಬರಹಗಾರರ ಅಥವಾ ವಕೀಲರ, ಸಾಕ್ಷಿಗಳ ಸಹಿ ಇಲ್ಲವೆಂದರೆ ಸರಿ. ಸಾಕ್ಷಿ ಸ್ವತಃ ನನ್ನ ಮತ್ತು 1ನೇ ಆರೋಪಿಯ ಸಹಿ ಇದೆ ಎಂದು ಹೇಳುತ್ತಾರೆ. ಸಾಕ್ಷಿದಾರರ ಕಾಲಂ ಖಾಲಿಯಿದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**